



# ಬಣ್ಣದ ಕೊಕ್ಕರೆಗಳ ಹೆರಿಗೆ ಮನೆ

**ಹಗರಿಬೊಮ್ಮನಹಳ್ಳಿಯ ಅಂಕಸಮುದ್ರದಲ್ಲಿ ತುಂಗಭದ್ರಾ ಹಿನ್ನೀರು ರೂಪಿಸಿರುವ ಪರಿಸರ ಪಕ್ಷಿಕಾಶಿಯಾಗಿ ರೂಪು ತಳೆದಿದೆ. ಬಣ್ಣದ ಕೊಕ್ಕರೆಗಳ ಪಾಲಿಗೆ ಅಂಕಸಮುದ್ರ ಬದುಕು ಕಟ್ಟಿಕೊಳ್ಳುವ ನೆಲೆಯೂ ಆಗಿದೆ.**

**■ ಸಿ. ಶಿವಾನಂದ**

ಅದು ಕರಿ ಜಾಲಿ ಮರಗಳಿಂದ ತುಂಬಿರುವ ಹಿನ್ನೀರಿನ ಪರಿಸರ. ಎಲ್ಲ ಜಾಲಿ ಮರಗಳಲ್ಲಿಯೂ ಬಣ್ಣದ ಕೊಕ್ಕರೆಗಳ (ಪೇಂಟೆಡ್ ಸ್ಟಾರ್ಕ್) ಚೆಲುವಿನ ಚಿತ್ತಾರ. ಮುಳ್ಳುಗಳೇ ಹೆಚ್ಚಾದ ಮರಗಳಲ್ಲಿ ಬಾನಾಡಿಗಳ ನೆಲೆ.

ಕೆರೆಯೆಂದರೆ ಊರಿನ ಪಾಲಿಗೆ ಜೀವನಾಡಿಯಷ್ಟೆ. ಈ ಕೆರೆ ಬಣ್ಣದ ಕೊಕ್ಕರೆಗಳಿಗೆ ತಾಯಿಮನೆಯೂ ಆಗಿದೆ. ಪಕ್ಷಿಗಳ ಸಂತಾನೋತ್ಪತ್ತಿಗೆ ‘ಹೆರಿಗೆ ಮನೆ’ ಆಗಿದೆ. ಬಾನಾಡಿಗಳ ಕಲರವ, ಜೋಗುಳದ ಇಂಪಾದ ದನಿ ಪ್ರತಿದಿನ ಇಲ್ಲಿ ಅನುರಣಿಸುತ್ತಲೇ ಇರುತ್ತದೆ. ಹಲವಾರು ಪಕ್ಷಿಗಳಿಗೆ ಇದೊಂದು ಆಶ್ರಯ ತಾಣ ಮತ್ತು ವಿಶ್ರಾಂತಿ ಧಾಮ.

ಇದು ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ತುಂಗಭದ್ರಾ ಹಿನ್ನೀರು ಪ್ರದೇಶದಲ್ಲಿರುವ ಅಂಕಸಮುದ್ರ ಪಕ್ಷಿ ಸಂರಕ್ಷಿತ ಮೀಸಲು ಪ್ರದೇಶ. 244 ಎಕರೆ ಪ್ರದೇಶದ ವಿಸ್ತಾರದ ಈ ಪ್ರದೇಶಕ್ಕೆ, ಪ್ರತಿವರ್ಷ ದೇಶ ವಿದೇಶಗಳ ಪಕ್ಷಿಗಳು ವಲಸೆ ಬರುತ್ತವೆ. ಚಳಿಗಾಲವನ್ನು ಕಳೆದ ಬಳಿಕ ಮತ್ತೆ ಬೇರೆಡೆಗೆ ಹೋಗುತ್ತವೆ. ಆದರೆ, ಬಣ್ಣದ ಕೊಕ್ಕರೆಗಳು (ಪೇಂಟೆಡ್ ಸ್ಟಾರ್ಕ್ ಪಕ್ಷಿಗಳು) ಇಲ್ಲಿಯೇ ಬೀಡು ಬಿಟ್ಟು ಬದುಕನ್ನು ಕಂಡುಕೊಂಡಿವೆ.

ಪ್ರತಿವರ್ಷ ಸಂತಾನೋತ್ಪತ್ತಿ ಮೂಲಕ ಬಣ್ಣದ ಕೊಕ್ಕರೆಗಳು ತಮ್ಮ ಸಂಖ್ಯೆಯನ್ನು ಸಾವಿರಗಟ್ಟಲೆ ಹೆಚ್ಚಿಸಿಕೊಂಡಿವೆ. ಆಹಾರಕ್ಕಾಗಿ ಕೆರೆಯಲ್ಲಿ ದೊರೆಯುವ ಮೀನಿನ ಮರಿಗಳೇ ಅವುಗಳಿಗೆ ಪರಮಾನ್ನ. ತುಂಗಭದ್ರಾ ಹಿನ್ನೀರು ಪ್ರದೇಶದಲ್ಲಿ ಪಕ್ಷಿಗಳಿಂದ ಆಹಾರಕ್ಕಾಗಿ ಶಿಕಾರಿಯೂ ನಡೆಯುತ್ತದೆ.

ಬಣ್ಣದ ಕೊಕ್ಕರೆಗಳು ಫೆಬ್ರುವರಿ ತಿಂಗಳಲ್ಲಿ ಮೊಟ್ಟೆ ಇಡುತ್ತವೆ. ಕಾವು ಕೊಡಲು ಆರಂಭಿಸಿ, ಮಾರ್ಚ್ ತಿಂಗಳಲ್ಲಿ ಮರಿ ಮಾಡುತ್ತವೆ. ಆಗಸ್ಟ್ ತಿಂಗಳವರೆಗೂ ಮರಿಗಳನ್ನು ಪೋಷಣೆ ಮಾಡುತ್ತವೆ. ತಾಯಿ ಹಕ್ಕಿಗಳ ನೆರಳಲ್ಲಿ ಮರಿಹಕ್ಕಿಗಳು ಮರದಿಂದ ಮರಕ್ಕೆ ಹಾರುವ, ವಿಶ್ರಾಂತಿ ಪಡೆಯುವ ದೃಶ್ಯಗಳನ್ನು ನೋಡುವುದು ಪಕ್ಷಿಪ್ರೇಮಿಗಳಿಗೆ ಹಬ್ಬವಿದ್ದಂತೆ.

ಪ್ರತಿಕ್ರಯಿಸಿ: feedback@sudha.co.in

